ಸಂತೋಷ
**ಪಿ.ಡಬ್ಲ್ಯೂ-1**

**ದಿನಾಂಕ 20.03.2024 ರಂದು** ಸಾಕ್ಷಿಗೆ **ಪ್ರಮಾಣ ವಚನ ಬೋಧಿಸಲಾಯಿತು.**
ಪಾಟಿ ಸವಾಲು ಪ್ರತಿವಾದಿಯರ ಪರ ಶ್ರೀ. ಎನ್ ಎಂ ಜಿ **ವಕೀಲರವರಿಂದಃ**

ನಾನು ಬಿ ಎ ಪದವೀಧರನಾಗಿರುತ್ತೇನೆ. ಪ್ರತಿವಾದಿಯರು ನಮ್ಮ ದಾಯಾದಿಯರು ಎಂದರೆ ಸರಿ. ಮೃತ ದೊಡ್ಡನಿಂಗೇಗೌಡರಿಗೆ ಓದು ಬರಹ ಬರುತ್ತಿರಲಿಲ್ಲ ಎಂದರೆ ಸರಿ. ಮೃತ ದೊಡ್ಡನಿಂಗೇಗೌಡರು ಯಾವುದೇ ವ್ಯವಹಾರಗಳನ್ನು ಮಾಡಬೇಕಾದರೂ ನನ್ನ ಸಹಾಯ ಪಡೆಯುತ್ತಿದ್ದರು ಎಂದರೆ ಸರಿ.

2. ಸಾಕ್ಷಿಗೆ ಪ್ರತಿವಾದಿ ಪರ ವಕೀಲರು ದಿನಾಂಕ 19.08.2016 ರ ಜೆರಾಕ್ಸ ನೊಂದಾಯಿತ ಆಧಾರ ಪತ್ರವನ್ನು ತೋರಿಸಿದ್ದು ಸದರಿ ಪತ್ರದಲ್ಲಿರುವ ಭಾವಚಿತ್ರವು ದೊಡ್ಡನಿಂಗೇಗೌಡರರದು ಎಂದರೆ ಸರಿ. ಸದರಿ ದಾಖಲೆಯಲ್ಲಿ ನಮ್ಮ ಗ್ರಾಮದ ನಿವಾಸಿಯಾದ ಬೋರೇಗೌಡ ಬಿನ್ ದ್ಯಾವೇಗೌಡರ ಭಾವಚಿತ್ರ ಇರುತ್ತದೆ ಎಂದರೆ ಸರಿ. ದಿನಾಂಕ 19.08.2016 ರಂದು 1 ನೇ ಪ್ರತಿವಾದಿಯ ಗಂಡನಾದ ದೊಡ್ಡನಿಂಗೇಗೌಡರು ಬೋರೇಗೌಡರಿಗೆ ರೂ 7,50,000/- ಸಾಲವಾಗಿ ಕೊಟ್ಟಿದ್ದು, ಅದರ ಸಲುವಾಗಿ ಬೋರೇಗೌಡರಿಂದ ದೊಡ್ಡನಿಂಗೇಗೌಡರ ಹೆಸರಿಗೆ ನನ್ನ ಮುಂದಾಳತ್ವದಲ್ಲಿ ಆಧಾರ ಪತ್ರ ಬರೆಯಲಾಗಿರುತ್ತದೆ ಎಂದರೆ ಸರಿಯಲ್ಲ. ದೊಡ್ಡನಿಂಗೇಗೌಡರು ಆರ್ಥಿಕವಾಗಿ ಸಬಲರಾಗಿದ್ದರು ಎಂದರೆ ಸರಿಯಲ್ಲ. ದೊಡ್ಡನಿಂಗೇಗೌಡರು ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದರು

ಎಂದರೆ ನನಗೆ ಗೊತ್ತಿಲ್ಲ. ಅನರೋಗ್ಯದಿಂದ ದೊಡ್ಡನಿಂಗೇಗೌಡರು ಆಸ್ಪತ್ರೆಗೆ ದಾಖಲಾಗಿದ್ದರು, ಆಗ ಅವರು ಮೃತಪಟ್ಟಿರುವುದಾಗಿ ನನಗೆ ಗೊತ್ತಾಯಿತು.

3. ದೊಡ್ಡನಿಂಗೇಗೌಡರು ನಮ್ಮ ಮನೆಗೆ ಬಂದು ಸಾಲವನ್ನು ಕೇಳಿರುತ್ತಾರೆ. ನಾನು ಸಾಲ ನೀಡುವ 3 ದಿನಗಳ ಹಿಂದೆ ದೊಡ್ಡನಿಂಗೇಗೌಡರು ನನ್ನ ಬಳಿ ಹಣ ಕೇಳಿರುತ್ತಾರೆ. ದೊಡ್ಡನಿಂಗೇಗೌಡರು ನನ್ನ ಬಳಿ ಸಾಲ ಕೇಳುವಾಗ ನನ್ನ ತಂದೆ ಹಾಗೂ ನನ್ನ ಅಣ್ಣ ಇದ್ದರು, ದೊಡ್ಡನಿಂಗೇಗೌಡರೇ ನಾನು ಸಾಲ ಪಡೆದಿರುವ ವಿಚಾರವನ್ನು ನಮ್ಮ ಮನೆಯವರಿಗೆ ಹೇಳಬೇಡಿ, ಕಬ್ಬಿನ ಬೆಳೆ ಬಂದ ತಕ್ಷಣ ಸಾಲ ಮರುಪಾವತಿ ಮಾಡುವುದಾಗಿ ಹೇಳಿದ್ದರು. ನಾನು ಯಾಕೆ ನಿಮ್ಮ ಮನೆಯವರಿಗೆ ತಿಳಿಸಬಾರದು ಎಂದು ಕೇಳಿದ್ದಕ್ಕೆ ದೊಡ್ಡನಿಂಗೇಗೌಡರು ಮನೆಯಲ್ಲಿ ಆರ್ಥಿಕ ಸಮಸ್ಯೆ ಇದೆ ಅದರ ಸಲುವಾಗಿ ಸಾಲ ಬೇಕು ಎಂದು ಕೇಳಿರುತ್ತಾರೆ. ನಾನು ದೊಡ್ಡನಿಂಗೇಗೌಡರಿಗೆ ಸಾಲ ನೀಡಿರುವ ವಿಚಾರವನ್ನು ಪ್ರತಿವಾದಿಯರಿಗೆ ತಿಳಿಸಿರುವುದಿಲ್ಲ. ಸಾಲದ ವಿಚಾರ ಪ್ರತಿವಾದಿಯರಿಗೆ ತಿಳಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ದೊಡ್ಡನಿಂಗೇಗೌಡರು ಸಾಲದ ವಿಚಾರ ಅವರ ಕುಟುಂಬದವರಿಗೆ ತಿಳಿಸಬಾರದು ಎಂದು ಹೇಳಿರುತ್ತಾರೆ, ಆದ ಕಾರಣ ನಾನು ತಿಳಿಸಿರುವುದಿಲ್ಲ. ನಮ್ಮ ಸಂಬಂದಿಧಕರು ಯಾರು ನನ್ನ ಮತ್ತು ದೊಡ್ಡನಿಂಗೇಗೌಡರ ಹಣದ ವ್ಯವಹಾರಕ್ಕೆ ಸೇರಿರುವುದಿಲ್ಲ.

4. ನಾನು ವ್ಯವಸಾಯ ಮಾಡುತ್ತೇನೆ, ನಮ್ಮ ಕುಟುಂಬದ ಎಲ್ಲಾ ವ್ಯವಹಾರಗಳನ್ನು ನನ್ನ ತಂದೆ ನೋಡಿಕೊಳ್ಳುತ್ತಾರೆ. ನಾನು ಬ್ಯಾಂಕ್ನ ಖಾತೆಯನ್ನು ಹೊಂದಿರುತ್ತೇನೆ. ನಿಯಮಾವಳಿಗಳ ಪ್ರಕಾರ ರೂ 20,000/- ಗಿಂತಲೂ ಹೆಚ್ಚಿನ ವ್ಯವಹಾರ ಮಾಡಬೇಕಾದರೆ ಚೆಕ್ಕಿನ ಮೂಲಕ ಮಾಡಬೇಕು ಎಂದರೆ ಸಾಕ್ಷಿಯು ದೊಡ್ಡನಿಂಗೇಗೌಡರು ನಗದು ರೂಪದಲ್ಲಿ ಸಾಲ ಕೇಳಿರುತ್ತಾರೆ, ಆದ್ದರಿಂದ ನಾನು ನಗದು ರೂಪದಲ್ಲಿ ನೀಡಿರುತ್ತೇನೆ. ಕಬ್ಬಿನ ಬೆಳೆಯಿಂದ ಬಂದಿರುವ ಹಣ ಹಾಗೂ ಸ್ವಲ್ಪ ಚಿನ್ನವನ್ನು ಅಡವಿಟ್ಟು ದೊಡ್ಡನಿಂಗೇಗೌಡರಿಗೆ ರೂ 2 ಲಕ್ಷ ಸಾಲ ನೀಡಿರುತ್ತೇನೆ. ದಿನಾಂಕ 18.07.2022 ರಲ್ಲಿ ಬ್ಯಾಂಕ್ ಆಫ್ ಬರೋಡಾದಲ್ಲಿ ಚಿನ್ನದ ಒಡವೆಗಳನ್ನು ಅಡವಿಟ್ಟಿರುತ್ತೇನೆ. ಚಿನ್ನವನ್ನು ಅಡವಿಟ್ಟಿರುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ರೀತಿಯ ತೊಂದರೆ ಇರುವುದಿಲ್ಲ.

5. ಪತ್ರ ಬರಹಗಾರರಾದ ರಾಮಮೂರ್ತಿಯವರ ಕಚೇರಿಯಲ್ಲಿ ನಾನು ದೊಡ್ಡನಿಂಗೇಗೌಡರಿಗೆ ಸಾಲ ನೀಡಿರುತ್ತೇನೆ. ಈಗ ಪತ್ರ ಬರಹಗಾರರಾದ ರಾಮಮೂರ್ತಿ ಮೃತ ಹೊಂದಿರುತ್ತಾರೆ. ನಾನು ಹಣ ನೀಡುವಾಗ ವೆಂಕಿ ಮತ್ತು ಪಿ ಕೆ ಪ್ರಕಾಶ ಎಂಬ ಸಾಕ್ಷಿದಾರರು ಇದ್ದರು. ಸದರಿ ಸಾಕ್ಷಿದಾರರು ದೊಡ್ಡನಿಂಗೇಗೌಡರ ಸಮಕಾಲೀನರಾಗಿರುವುದಿಲ್ಲ, ದೊಡ್ಡನಿಂಗೇಗೌಡರೇ ಸಾಕ್ಷಿದಾರರನ್ನು ಕರೆದುಕೊಂಡು ಬಂದಿರುತ್ತಾರೆ. ಸಾಕ್ಷಿದಾರರು ನನ್ನ ಸಮಕಾಲೀನರು ಎಂದರೆ ಸರಿಯಲ್ಲ. ಸಾಕ್ಷಿದಾರರು ನನ್ನ ಸಂಬಂಧಿಕರಲ್ಲ, ಸಾಕ್ಷಿದಾರರು ನನ್ನ ಸ್ನೇಹಿತರು ಎಂದರೆ ಸರಿಯಲ್ಲ.

6. ನಿಪಿ-1 ಮತ್ತು 2 ರಲ್ಲಿ ಕಂಡು ಬರುತ್ತಿರುವ 4 ಹೆಬ್ಬೆಟ್ಟು ಗುರುತುಗಳು ದೊಡ್ಡನಿಂಗೇಗೌಡರದು. ಸದರಿ ಹೆಬ್ಬೆಟ್ಟು ಗುರುತುಗಳನ್ನು ಪತ್ರ ಬರಹಗಾರರಾದ ರಾಮಮೂರ್ತಿಯವರು ದಾಖಲೆಗಳಿಗೆ ಹಾಕಿಸಿರುತ್ತಾರೆ. ನಿಪಿ-1 ಮತ್ತು ನಿಪಿ-2 ರಲ್ಲಿರುವ ಒಕ್ಕಣಿಕೆಗಳನ್ನು ಪತ್ರ ಬರಹಗಾರರಾದ ರಾಮಮೂರ್ತಿಯವರು ಬರೆದಿರುತ್ತಾರೆ. ನಿಪಿ-1 ಮತ್ತು 2 ರಲ್ಲಿ 2 ಹೆಬ್ಬೆಟ್ಟು ಗುರುತುಗಳಲ್ಲಿ ದೊಡ್ಡನಿಂಗೇಗೌಡರ ಹೆಬ್ಬೆಟ್ಟು ಗುರುತುಗಳು ಎಂದು ಬರೆದಿರುತ್ತಾರೆ, ಇನ್ನು 2 ಹೆಬ್ಬೆಟ್ಟು ಗುರುತುಗಳು ಯಾರದು ಎಂದು ಬರೆದಿರುವುದಿಲ್ಲ ಎಂದರೆ ಸರಿ. ಹೆಬ್ಬೆಟ್ಟು ಗುರುತುಗಳನ್ನು ಹಾಕಿಸಿಕೊಂಡು ನಂತರ ಜೆರಾಕ್ಸ ತೆಗೆದುಕೊಂಡು ಮತ್ತೇ ಒಕ್ಕಣಿಕೆಗಳನ್ನು ಬರೆದಿರುತ್ತಾರೆ. ನಾನು ಸಾಕ್ಷಿಗೆ ಜೆರಾಕ್ಸನ್ನು ನೋಡಿರುವುದಿಲ್ಲ.

6. ಪತ್ರ ಬರಹಗಾರರು ದೊಡ್ಡನಿಂಗೇಗೌಡರು ಹಾಕಿರುವ ಆನ್ ಡಿಮ್ಯಾಂಡ್ ಪ್ರೊನೋಟಗಳ ಜೆರಾಕ್ಸ ಪ್ರತಿಯನ್ನು ತೆಗೆದುಕೊಂಡಿರುವ ವಿಚಾರವನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದಿಲ್ಲ. ಜೆರಾಕ್ಸ ತೆಗೆದ ನಂತರ ನಿಪಿ-1 ಮತ್ತು 2 ದಾಖಲೆಗಳ ಒಕ್ಕಣಿಕೆಗಳನ್ನು ಬರೆದಿರುತ್ತಾರೆ ಎಂದರೆ ಸರಿ. ನಿಪಿ-1 ಮತ್ತು 2 ದಾಖಲೆಗಳನ್ನು ನಾವು ಸೃಷ್ಟಿ ಮಾಡಿರುವ ದಾಖಲೆಗಳು ಎಂದರೆ ಸರಿಯಲ್ಲ. ಆಧಾರ ಪತ್ರ ನೊಂದಣಿ ಮಾಡಿಸುವ ಕಾಲದಲ್ಲಿ ನಿಪಿ-1 ಮತ್ತು 2 ದಾಖಲೆಗಳು ಮೇಲೆ ದೊಡ್ಡನಿಂಗೇಗೌಡರ ಹೆಬ್ಬೆಟ್ಟು ಗುರುತುಗಳನ್ನು ಹಾಕಿಸಿಕೊಂಡಿರುತ್ತೇನೆ, ಆಗ ದೊಡ್ಡನಿಂಗೇಗೌಡರು ಆಧಾರ ಪತ್ರದೊಂದಿಗೆ ಜೆರಾಕ್ಸ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದೊಡ್ಡನಿಂಗೇಗೌಡರು ಅವಿದ್ಯಾವಂತರಾದ ಕಾರಣ ಆಧಾರ ಪತ್ರದ ಸಮಯದಲ್ಲಿ ಎಲ್ಲಾ ದಾಖಲೆಗಳನ್ನು ಜೆರಾಕ್ಸ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

7. ದೊಡ್ಡನಿಂಗೇಗೌಡರು ಮೃತ ಹೊಂದಿದ ನಂತರ ನಾನು ಪತ್ರ ಬರಹಗಾರರಿಗೆ ಹಣ ಕೊಟ್ಟು ನಿಪಿ-1 ಮತ್ತು 2 ರ ಒಕ್ಕಣಿಕೆಗಳನ್ನು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ಮತ್ತು 2 ದಾಖಲೆಗಳಲ್ಲಿ ಸಾಕ್ಷಿದಾರರು ಸಹಿ ಮಾಡಲು ಜಾಗವಿಲ್ಲದೇ ಇದ್ದಾಗ ಸಾಕ್ಷಿದಾರರ ಸಹಿಗಳನ್ನು ನಿಪಿ-1 ಮತ್ತು 2 ದಾಖಲೆಗಳಲ್ಲಿ ಸೃಷ್ಟಿ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಪತ್ರ ಬರಹಗಾರರು ನಿಪಿ-1 ಮತ್ತು 2 ದಾಖಲೆಗಳಲ್ಲಿ ಸಾಕ್ಷಿದಾರರ ಸಹಿ ಅಲ್ಲೇ ಹಾಕಿ ಎಂದು ಹೇಳಿ ಸಹಿ ಮಾಡಿಸಿರುತ್ತಾರೆ. ಸದರಿ ವಿಚಾರದ ಬಗ್ಗೆ ಯಾವುದೇ ಷರಾ ಇರುವುದಿಲ್ಲ ಎಂದರೆ ಸರಿ.

8. ದೊಡ್ಡನಿಂಗೇಗೌಡರಿಗೆ ನನ್ನ ಬಳಿ ಸಾಲ ಮಾಡುವ ದರದ್ದು ಇರುವುದಿಲ್ಲ, ನಾನು, ಪತ್ರ ಬರಹಗಾರರು, ಸಾಕ್ಷಿದಾರರು ಸೇರಿ ನಿಪಿ-1 ಮತ್ತು 2 ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರಿಗೆ ನೀಡಿರುವ ನೋಟಿಸಗೆ ಪ್ರತಿವಾದಿಯರು ಉತ್ತರ ನೀಡಿರುತ್ತಾರೆ ಎಂದರೆ ಸರಿ. ಪ್ರತಿವಾದಿಯರು ನೀಡಿರುವ ಪ್ರತ್ಯುತ್ತರ ನೋಟಿಸನ್ನು ವಾದಿಗೆ ತೋರಿಸಿದ್ದು ಸದರಿ ದಾಖಲೆಯನ್ನು ಸಾಕ್ಷಿ ಒಪ್ಪಿದ ಮೇರೆಗೆ ಸದರಿ ದಾಖಲೆಯನ್ನು ನಿಸಿ-1 ಎಂದು ಗುರುತಿಸಲಾಯಿತು. ನಾನು ಪ್ರತಿವಾದಿಯ ಸಂಬಂಧಿಯಾಗಿದ್ದು ನಿಪಿ-1 ಮತ್ತು 2 ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಂದ ದುರ್ಲಾಭ ಪಡೆಯುವ ಉದ್ದೇಶದಿಂದ ಸುಳ್ಳು ದಾವೆಯನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ
ಮುಂದುವರಿದ ವಾದಿ ಪರ ವಿಚಾರಣೆಗೆ ಸಮಯಾವಕಾಶ ನೀಡಲಾಗಿದೆ.

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.**

**ಸಾ.ಓ.ಹೇ.ಸ.ಇದೆ.**

2 ನೇ ಅಪರ ಸಿವಿಲ್ ಜಡ್ಜ್ ಮತ್ತು
ಜೆಎಂಎಫ್‌ಸಿ, ಪಾಂಡವಪುರ.